ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :

# ಸಾರ್ವಜನಿಕರಿಗೆ ಸರ್ಕಾರದ ಸೇವೆಗಳು ಶೀಘ್ರ ಸಿಗಬೇಕು

## ಆಡಳಿತ ಸುಧಾರಣಾ ಆಯೋಗದ ನೂತನ ಅಧ್ಯಕ್ಷ ಟಿ.ಎಂ. ವಿಜಯಭಾಸ್ಕರ್ ಆಶಯ

* ರಫೀಕ್ ಅಹ್ಮದ್

**ಆರ್ಥಿಕ ಮಿತವ್ಯಯ ಪಾಲನೆ, ಇಲಾಖೆಗಳ ವಿಲೀನದ ಚರ್ಚೆಯ ಜೊತೆಗೆ ಹೆಚ್ಚುವರಿ ಹುದ್ದೆಗಳ ಹೊರೆ, ಖಾಲಿ ಹುದ್ದೆಗಳ ಭರ್ತಿ, ಹೊಸ ಹುದ್ದೆಗಳ ಸೃಜನೆ ಸೇರಿ ಹತ್ತು-ಹಲವು ಆಡಳಿತಾತ್ಮಕ ಸಮಸ್ಯೆ ಹಾಗೂ ಸವಾಲುಗಳ ಮಧ್ಯೆ ರಾಜ್ಯ ಸರ್ಕಾರ ಆಡಳಿತ ಸುಧಾರಣಾ ಆಯೋಗ-2 ರಚನೆ ಮಾಡಿ ಅದಕ್ಕೆ ನಿಕಟಪೂರ್ವ ಮುಖ್ಯ ಕಾರ್ಯದರ್ಶಿ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಟಿ.ಎಂ. ವಿಜಯಭಾಸ್ಕರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದೆ. ಈ ನಿಟ್ಟಿನಲ್ಲಿ 'ಉದಯವಾಣಿ'ಯೊಂದಿಗೆ ಅವರು ಮಾತನಾಡಿದ್ದಾರೆ.**

ಚಿಟ್ ಚಾಟ್

**ಆಯೋಗದ ಅಧ್ಯಕ್ಷರಾಗಿದ್ದೀರಿ, ಆಡಳಿತ ಸುಧಾರಣೆ ಬಗ್ಗೆ ನಿಮ್ಮ ಕಲ್ಪನೆ ಏನು?**

ಈಗಷ್ಟೇ ನೇಮಕಾತಿ ಆದೇಶ ನೋಡಿದ್ದೀನಿ. ಅಧಿಕಾರಿಗಳು ಮತ್ತು ಸಂಬಂಧಪಟ್ಟವರ ಜೊತೆ ಚರ್ಚಿಸಿ ಹಾಗೂ ಮುಖ್ಯಮಂತ್ರಿಯವರ ಮಾರ್ಗದರ್ಶನ ಪಡೆದುಕೊಂಡು ಮುಂದೆ ಹೋಗುತ್ತೇನೆ.

**ಆಡಳಿತ ಸುಧಾರಣೆ ವಿಚಾರದಲ್ಲಿ ತಮ್ಮ ಆದ್ಯತೆ ಏನು?**

ಸಾರ್ವಜನಿಕರಿಗೆ ಸರ್ಕಾರದ ಸೇವೆಗಳು ಶೀಘ್ರವಾಗಿ, ಯಾವುದೇ ವಿಳಂಬ ಮತ್ತು ತೊಂದರೆ ಇಲ್ಲದೆ ಸುಗಮವಾಗಿ ಸಿಗಬೇಕು. ಸಾರ್ವಜನಿಕ ಕುಂದುಕೊರತೆಗಳು ತ್ವರಿತವಾಗಿ ವಿಲೇಯಾಗಬೇಕು ಎಂಬ ಅಂಶಗಳಿವೆ. ಇದರ ಜೊತೆಗೆ ಎಲ್ಲೆಲ್ಲಿ ಹೆಚ್ಚುವರಿ ಹುದ್ದೆಗಳಿವೆ ಅವುಗಳನ್ನು ಗುರುತಿಸಬೇಕಿದೆ.

**ಹಾರನಹಳ್ಳಿ ರಾಮಸ್ವಾಮಿ ಆಯೋಗದ ಶಿಫಾರಸುಗಳ ಅನುಷ್ಠಾನದ ಪರಿಶೀಲನೆಯು ನಿಮ್ಮ ವ್ಯಾಪ್ತಿಯಲ್ಲಿದೆ, ಈ ಬಗ್ಗೆ ಏನು ಹೇಳುತ್ತೀರಿ?**

ಹೌದು ಇದೆ...ಆ ಶಿಫಾರಸುಗಳನ್ನು ಇನ್ನೂ ನೋಡಬೇಕಿದೆ. ಅದನ್ನು ನೋಡಿದ ಮೇಲೆ ಏನೆಂದು ವಿಚಾರ ಮಾಡುತ್ತೇನೆ.



ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯ 2ನೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗಕ್ಕೆ ಒಂದು ವರ್ಷದಲ್ಲಿ ಮಧ್ಯಂತರ ವರದಿ ಹಾಗೂ ಎರಡು ವರ್ಷದಲ್ಲಿ ಅಂತಿಮ ವರದಿ ಸಲ್ಲಿಸಬೇಕಿದೆ. ಆಯೋಗಕ್ಕೆ ವಹಿಸಲಾಗಿರುವ ವಿಷಯಗಳೆಂದರೆ, ಹಾರನಹಳ್ಳಿ ರಾಮಸ್ವಾಮಿ ಆಯೋಗದ ಶಿಫಾರಸುಗಳ ಅನುಷ್ಠಾನದ ಪರಿಶೀಲನೆ, ಇಲಾಖೆಗಳ ಪುನರ್ ರಚನೆ, ಸರ್ಕಾರದ ಎಲ್ಲಾ ಹಂತಗಳಲ್ಲಿನ ಸಿಬ್ಬಂದಿ ಬಲದ ಸಮರ್ಪಕ ಹೊಂದಾಣಿಕೆಗೆ ಶಿಫಾರಸು ಮಾಡುವುದು, ತಂತ್ರಜ್ಞಾನದ ಬಳಕೆ ಪರಿಣಾಮ ಅನೇಕ ಇಲಾಖೆಗಳಲ್ಲಿನ ಅನಗತ್ಯ ಮತ್ತು ಹೆಚ್ಚುವರಿ ಹುದ್ದೆಗಳ ಗುರುತಿಸುವಿಕೆ ಮತ್ತು ಇಲಾಖೆ, ಮಂಡಳಿ, ನಿಗಮಗಳನ್ನು ವಿಲೀನಗೊಳಿಸು ಸಾಧ್ಯತೆ ಬಗ್ಗೆ ಸೂಚಿಸುವುದು. 21ನೇ ಶತಮಾನದ ಮುಂಬರುವ ದಶಕಗಳ ಆಕಾಂಕ್ಷೆ, ಅಗತ್ಯಗಳ ಪೂರೈಕೆಗೆ ಸೂಕ್ತವಾದ ಆಡಳಿತ ವ್ಯವಸ್ಥೆಯನ್ನು ಮತ್ತು ರಚನಾತ್ಮಕ ಸುಧಾರಣೆಗಳನ್ನು ಶಿಫಾರಸು ಮಾಡುವುದು.

> 'ಆಡಳಿತ ಸುಧಾರಣೆ ಅನ್ನುವುದು ನಿಂತ ನೀರಲ್ಲ, ಅದೊಂದು ನಿರಂತರ ಪ್ರಕ್ರಿಯೆ. ಆಡಳಿತದಲ್ಲಿ ಸುಧಾರಣೆ ಆಗಬೇಕಿರುವುದು ಬಹಳಷ್ಟಿದೆ. ಈ ನಿಟ್ಟಿನಲ್ಲಿ 6ನೇ ಹಣಕಾಸು ಆಯೋಗದ ವರದಿಯಲ್ಲೂ ಕೆಲವು ಶಿಫಾರಸುಗಳನ್ನು ಮಾಡಲಾಗಿದೆ, ಅವುಗಳು ಜಾರಿಗೆ ಬರಬೇಕಿದೆ. ಸಮಗ್ರವಾಗಿ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಎಲ್ಲಾ ರೀತಿಯ ಆಡಳಿತ ಸಮಸ್ಯೆಗಳ ಬಗ್ಗೆ ಪರಿಶೀಲನೆ ನಡೆಸಲು ಆಡಳಿತ ಸುಧಾರಣಾ ಆಯೋಗ ರಚನೆ ಮಾಡಿರುವುದು ಸ್ವಾಗತಾರ್ಹ ಮತ್ತು ಸಂತೋಷದ ವಿಚಾರ'.
>
> * ಎಂ.ಆರ್. ಶ್ರೀನಿವಾಸಮೂರ್ತಿ, ಆರನೇ ವೇತನ ಆಯೋಗದ ಅಧ್ಯಕ್ಷರು

### ರಾಮಸ್ವಾಮಿ ಆಯೋಗದ ಶಿಫಾರಸುಗಳು

ಆಡಳಿತ ವ್ಯವಸ್ಥೆಯ ಆಮೂಲಾಗ್ರ ಸುಧಾರಣೆಗೆ ಸೂಕ್ತ ಶಿಫಾರಸುಗಳನ್ನು ನೀಡಲು 2000ನೇ ಇಸ್ವಿಯಲ್ಲಿ ಹಾರನಹಳ್ಳಿ ರಾಮಸ್ವಾಮಿ ನೇತೃತ್ವದಲ್ಲಿ ಕರ್ನಾಟಕ ಆಡಳಿತ ಸುಧಾರಣಾ ಆಯೋಗ ರಚಿಸಲಾಗಿತ್ತು. 2001ರಲ್ಲಿ ಆಯೋಗವು ತನ್ನ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಆಯೋಗವು ಒಟ್ಟು 256 ಶಿಫಾರಸುಗಳನ್ನು ಮಾಡಿತ್ತು. ಅದರಲ್ಲಿ ರಾಜ್ಯ ಸರ್ಕಾರ 234 ಶಿಫಾರಸುಗಳನ್ನು ಜಾರಿಗೆ ತಂದಿದೆ.

### ಪ್ರಮುಖ ಶಿಫಾರಸುಗಳು

- ರಾಜ್ಯದ ಬೊಕ್ಕಸದ ಹಿತದೃಷ್ಟಿಯಿಂದ ಹಾಗೂ ಆಡಳಿತ ಸಿಬ್ಬಂದಿಯ ಗಾತ್ರವನ್ನು ಸರಿಗೊಳಿಸಲು ಹುದ್ದೆಗಳ ಕಡಿತ ಅನಿವಾರ್ಯ. ವರ್ಷಗಳಿಗೊಮ್ಮೆ ಮಾತ್ರ ವೇತನ ಆಯೋಗ ರಚಿಸಬೇಕು.
- 15 ವರ್ಷ ಸೇವಾವಧಿ ಪೂರೈಸಿದ ಎಲ್ಲ ನೌಕರರಿಗೆ ಸಾಮರ್ಥ್ಯ ಸಾಬೀತು ಪರೀಕ್ಷೆಯನ್ನು ನಡೆಸಬೇಕು. 25 ವರ್ಷಗಳ ಸೇವಾವಧಿ ನಂತರ ಇನ್ನೊಮ್ಮೆ ಪರೀಕ್ಷೆ ನಡೆಸಬೇಕು.
- ಸ್ವಯಂ ನಿವೃತ್ತಿ ಯೋಜನೆ (ವಿಆರ್ಎಸ್)ಯಡಿ 25 ಸಾವಿರ ಹುದ್ದೆಗಳನ್ನು ಕಡಿತಗೊಳಿಸಬೇಕು.
- ಕೆಲವು ಮಂಡಳಿಗಳು, ನಿಗಮಗಳು, ಸರ್ಕಾರಿ ಉದ್ದಿಮೆಗಳನ್ನು ಸರ್ಕಾರ ಕೈ ಬಿಡಬೇಕು.